


# ನಕ್ಕುಬಿಡಿ..!

## ಅರೆ..! ನೀನಾ?



54 ವರ್ಷದ ಮಹಿಳೆಯೊಬ್ಬಳಿಗೆ ಹಾರ್ಟ್ ಅಟ್ಯಾಕ್ ಆಯಿತು. ಕೂಡಲೇ ಅವಳನ್ನು ಆಸ್ಪತ್ರೆಗೆ ಸೇರಿಸಿದರು. ಆಪರೇಷನ್ ಟೇಬಲ್ ಮೇಲೆ ಮಲಗಿಸುತ್ತಿರುವಾಗ ಆಕೆ ಸಾವಿನ ಮನೆಯ ಬಾಗಿಲನ್ನು ತಟ್ಟುತ್ತಿದ್ದಳು. ಅಲ್ಲಿ ಅವಳಿಗೆ ದೇವರು ಕಾಣಿಸಿದ. 'ಓ ದೇವರೇ, ನನ್ನ ಆಯುಷ್ಯ ಮುಗಿಯಿತೇ?' ಎಂದು ಆಕೆ ಪ್ರಶ್ನಿಸಿದಳು. ಆಗ ದೇವರು 'ಇಲ್ಲ, ನಿನ್ನ ಆಯುಷ್ಯ ಇನ್ನೂ ಮುಗಿದಿಲ್ಲ. ಇನ್ನೂ ನಿನಗೆ 43 ವರ್ಷ, 2 ತಿಂಗಳು ಹಾಗೂ 8 ದಿನಗಳ ಆಯುಷ್ಯ ಇದೆ' ಎಂದ.

ಆರೋಗ್ಯ ಸ್ವಲ್ಪ ಸುಧಾರಿಸಿದ ಬಳಿಕ ಆಕೆ ಆ ಆಸ್ಪತ್ರೆಯಲ್ಲೇ ಉಳಿಯಲು ತೀರ್ಮಾನಿಸಿದಳು. ಇನ್ನೂ 43 ವರ್ಷ ಬದುಕುವುದಾದರೆ ಇನ್ನಷ್ಟು ಸ್ಟೈಲಾಗಿ ಬದುಕಲು ತೀರ್ಮಾನಿಸಿದಳು. ಫೇಸ್ ಲಿಫ್ಟ್, ಲಿಪೊಸಕ್ಷನ್, ಬ್ರೆಸ್ಟ್ ಇಂಪ್ಲಾಂಟ್ ಮತ್ತು ಬೇಡವಾದ ಕೊಬ್ಬನ್ನು ತೆಗಿಸಿ ದೇಹವನ್ನು ಟ್ರಿಮ್ ಮಾಡಿಸಿಕೊಂಡಳು. ಒಬ್ಬಳು ಬಂದು ಅವಳ ಕೂದಲ ಬಣ್ಣವನ್ನು ಬದಲಾಯಿಸಿದಳು. ಅವಳ ಹಲ್ಲುಗಳನ್ನೂ ಹೊಳಪಾಗುವಂತೆ ಮಾಡಲಾಯಿತು. ಕೊನೆಗೆ ಸೌಂದರ್ಯದ ಎಲ್ಲ ಆಪರೇಷನ್‌ಗಳೂ ಮುಗಿದ ಮೇಲೆ ಆಕೆಯನ್ನು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಲಾಯಿತು.

ಆಸ್ಪತ್ರೆಯಿಂದ ಅವಳು ಮನೆಗೆ ಹೊರಟಳು. ಇನ್ನೇನು ರಸ್ತೆ ದಾಟಬೇಕೆನ್ನುವಷ್ಟರಲ್ಲಿ ಒಂದು ಆಂಬುಲೆನ್ಸ್ ಡಿಕ್ಕಿ ಹೊಡೆದು ಆಕೆ ಸ್ಥಳದಲ್ಲೇ ಸತ್ತೇ ಹೋದಳು!

ಸತ್ತ ಬಳಿಕವೂ ದೇವರು ಕಾಣಿಸಿದ. ಆಕೆ ಸಿಟ್ಟಿನಿಂದ, 'ನೀನು ನನಗೆ ಇನ್ನೂ 43 ವರ್ಷ ಆಯುಷ್ಯ ಇದೆ ಎಂದು ಏಕೆ ಸುಳ್ಳು ಹೇಳಿದೆ? ಆಯುಷ್ಯ ಇದ್ದಿದ್ದೇ ನಿಜವಾಗಿದ್ದರೆ ಆಂಬುಲೆನ್ಸ್ ಡಿಕ್ಕಿ ಹೊಡೆಯುವಾಗ ನನ್ನನ್ನು ತಳ್ಳಿ ಬದುಕಿಸಬಹುದಿತ್ತಲ್ಲವೆ?' ಎಂದು ಜೋರು ಧ್ವನಿಯಲ್ಲಿ ಪ್ರಶ್ನಿಸಿದಳು.



ದೇವರು ಆಕೆಯನ್ನು ಸ್ವಲ್ಪ ಹೊತ್ತು ದಿಟ್ಟಿಸಿ ನೋಡಿದ. 'ಅಯ್ಯೋ ನೀನಾ?! ನನಗೆ ಗುರುತೇ ಸಿಗಲಿಲ್ಲವೆ?' ಎಂದ!

–ವಿದ್ಯಾ (ನೆಟ್‌ನಿಂದ ಹಾರಿಸಿದ್ದು)